

## ಪಾಂಡವರ ಬತ್ತಿ ಗಿಡ

ಇದೊಂದು ವಿಶಿಷ್ಟವಾದ ಸಸ್ಯ. ಪಾಂಡವರ ಬತ್ತಿ ಗಿಡ ಎಂದು ಇದನ್ನು ಗ್ರಾಮೀಣ ಪ್ರದೇಶದಲ್ಲಿ ಗುರುತಿಸಲಾಗಿದೆ. ಪಾಂಡವರು ವನವಾಸಕ್ಕೆ ಹೋದಾಗ ಈ ಸಸ್ಯದ ಕುಡಿಯಿಂದ ದೀಪ ಬೆಳಗಿಸುತ್ತಿದ್ದರು ಎನ್ನುವ ನಂಬಿಕೆ ಇದೆ. ಈ ಸಸ್ಯದ ಹಸಿ ಎಲೆಯಿಂದಲೇ ದೀಪ ಉರಿಸಬಹುದು.

ಒಣಗಿಸುವುದು, ಬತ್ತಿ ಮಾಡುವುದು ಏನೂ ಬೇಡ. ಚಿಗುರು ಎಲೆಯನ್ನು ಎಣ್ಣೆಯಲ್ಲಿ ಅದ್ದಿ ದೀಪಹಚ್ಚಿದರೆ ದೀಪ ಚೆನ್ನಾಗಿ ಉರಿಯುತ್ತದೆ. ಈ ಸಸ್ಯ ಮಲೆನಾಡಿನ ಕಾಡಂಚಿನ ರಸ್ತೆಬದಿಯಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ. ಆಗುಂಬೆ ಘಾಟಿಯಲ್ಲೂ ರಸ್ತೆಬದಿ ಈ ಸಸ್ಯ ಕಣ್ಣಿಗೆ ಬಿತ್ತು. ತೆಗೆದುಕೊಂಡು ಹೋಗಿ ಮನೆಯಲ್ಲಿ ಪ್ರಯತ್ನಿಸಿದ ಫಲವೇ ಈ ಚಿತ್ರ.

–ಪ್ರಭಾ ಪಿ. ಶಾಸ್ತ್ರಿ, ಶಿವಮೊಗ್ಗ

## ಮರೆಯಾದ ಮಡ್ಲ ಕೊಡೆ

ಮಳೆ ಬಂತೋ ಮಳೆರಾಯ...
ಕೊಡಿ ತಾರೋ ಸುಬ್ರಾಯ....

ಈ ಹಾಡು ಮಳೆಗಾಲದ ನಾಂದಿ ಕಾಲದಲ್ಲಿ ಪ್ರತಿ ವರುಷವೂ ನನಗೆ ನೆನಪಾಗುತ್ತದೆ. ನಾವೆಲ್ಲ ಪ್ರಾಥಮಿಕ ಶಾಲೆಗೆ ಹೋಗುವಾಗ ಮಳೆಗಾಲದ ಪ್ರಥಮ ಮಳೆಗೆ ಸಿಲುಕಿ ಮನೆಗೆ ಗುಂಪಾಗಿ ಓಡೋಡಿ ಬರುವಾಗ ಈ ಹಾಡನ್ನು ಹಾಡುತ್ತಾ ಅದರ ಸೊಗಡನ್ನು ಅನುಭವಿಸುತ್ತಿದ್ದೆವು. ಆ ಕಾಲ ಒಂದು ಅಭೂತಪೂರ್ವ ಸುಖಮಯ ಲೋಕವಾಗಿತ್ತು. ಮಳೆಗೆ ನೆನೆದ ಪಟ್ಟಿ, ಪುಸ್ತಕಗಳನ್ನು ಹಿತ್ತೊಲೆಯ ಮೇಲೆ ಇಟ್ಟು ಒಣಗಿಸುವ ಪರಿ ಇನ್ನೂ ಹಸಿರಾಗಿದೆ.



ಆಗ ಮಳೆಗಾಲ ಪ್ರಾರಂಭವಾಗುವ ಹೊತ್ತಿಗೆ 'ಮಡ್ಲ ಕೊಡೆ' ಮಾರಾಟ ಮಾಡುವವರು ಮನೆ ಮನೆಗೆ ಬರುತ್ತಿದ್ದರು. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ವಿವಿಧ ಆಕಾರದ ಮಡ್ಲಿನ ಕೊಡೆಗಳನ್ನು ಮನೆಯವರು ಕೊಂಡುಕೊಳ್ಳುತ್ತಿದ್ದರು. ಕೊಡೆಯನ್ನು ವ್ಯಾಪಾರಕ್ಕೆ ಇಡದೆ ಅದರ ಬದಲಿಗೆ ಅಕ್ಕಿ, ಭತ್ತ ವಿನಿಮಯ ಆಗುತ್ತಿತ್ತು. ಅದೂ ಸಿದ್ದಿ, ಕೊಳಗದ ಲೆಕ್ಕದಲ್ಲಿ.

ಈ ಕೊಡೆಗಳನ್ನು ತಾಳೆ ಮಡ್ಲು(ಗರಿ) ಬಳಸಿ ಹಾಗೂ ಬಂದಗ (ಒಂದು ಜಾತಿಯ ಬಿದಿರು) ಉಪಯೋಗಿಸಿ ತಯಾರು ಮಾಡುತ್ತಿದ್ದರು. ಅಂದಿನ ದಿನಗಳಲ್ಲಿ ಕುಮಟಾ ತಾಲ್ಲೂಕಿನ ಮಾದನಗೇರಿಯಲ್ಲಿ ಅತ್ಯಂತ ಕಲಾತ್ಮಕವಾಗಿ ಮಡ್ಲ ಕೊಡೆಗಳನ್ನು ತಯಾರು ಮಾಡುವ ನಿಪುಣರು ಇದ್ದರು. ಅಂತಹ ಕಲಾತ್ಮಕವಾದ ಮಡ್ಲಿನ ಕೊಡೆಗೆ ಹೆಚ್ಚು ಭತ್ತ ಅಥವಾ ಅಕ್ಕಿ ಕೊಡಬೇಕಾಗಿತ್ತು. ಮುಖ್ಯವಾಗಿ ಅಂತಹ ಕೊಡೆಗಳನ್ನು ಮನೆಯ ಯಜಮಾನ ಬಳಸುತ್ತಿದ್ದರು. ಮಳೆಗಾಲ ಮುಗಿದ ಮಲೆ ಈ ಮಡ್ಲಿನ ಕೊಡೆಗಳನ್ನು ಹೊಗೆ ತಾಗುವಂತೆ ನಾಣ್ಣೆ ಕೊಟ್ಟಿಗೆಯ ಅಟ್ಟದ ಮೇಲೆ ಇಡುತ್ತಿದ್ದರು. ಇವು ನಾಲ್ಕು ವರುಷದವರೆಗೂ ಬಾಳಿಕೆ ಬರುತಿದ್ದವು. ಈ ಆಧುನಿಕ ಕಾಲದಲ್ಲಿ ಅತಿ ಸುಧಾರಿತ ಕೊಡೆಗಳ ಆಗಮನದಿಂದ ಮಡ್ಲ ಕೊಡೆಗಳು ಮರೆಯಾಗಿವೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ



## ಹುಳಿ ಸಿಹಿಯ ಕರಿಮುಳ್ಳಣ್ಣು

ಚಳಿಗಾಲದ ನಂತರ ಮಲೆನಾಡಿನ ಬೆಟ್ಟ ಗುಡ್ಡಗಳಲ್ಲಿ ಕುರುಚಲು ಮುಳ್ಳಿನ ಗಿಡದ 'ಕರಿಮುಳ್ಳಣ್ಣು' ಕಾಣಸಿಗದೆ ಇರದು. ಆಳೆತ್ತರಕ್ಕೆ ಮರದ ನೆರಳಿನಲ್ಲಿ ಉಳಿದ ಗಿಡಗಳಿಗೆ ಅಂಟಿಕೊಂಡೇ ಬೆಳೆಯುವ ಕರಿಮುಳ್ಳಣ್ಣಿನ ಗಿಡದ ಮೈ ತುಂಬಾ ಮುಳ್ಳು ಇರುತ್ತದೆ. ಇದರ ನಡುವೆ ಅರಳಿಕೊಂಡ ಕಪ್ಪು, ಹಸಿರು ಬಣ್ಣದ ಮುಳ್ಳಣ್ಣು ಕೀಳುವುದು ಸಾಹಸದ ಕೆಲಸ.

ಹುಳಿ ಸಿಹಿ ಮಿಶ್ರಿತ ಕಪ್ಪು ಕವಚದ ಈ ಹಣ್ಣಿನೊಳಗೆ ಬೀಜದ ಭಾಗವೇ ಹೆಚ್ಚು. ನಾಲಿಗೆಯ ಸ್ವಾದಕ್ಕೆ ಹಿತವೆನಿಸುವ ಮುಳ್ಳಣ್ಣು ಕೀಳುವಾಗ ಕೈ, ಮೈಗೆ ಗಾಯವಾಗುವುದು ಸಹಜ. ಬಾಲ್ಯದಲ್ಲಿ ಬೊಗಸೆಗಟ್ಟಲೆ ಮುಳ್ಳಣ್ಣು ಸಂಗ್ರಹಿಸುವುದೆಂದರೆ ಅದೊಂದು ಸಂಭ್ರಮದ ಕ್ಷಣವೇ ಆಗಿತ್ತು. ಸುಮಾರು ತಿಂಗಳುಗಳ ಕಾಲ ಸಿಗುವ ಈ ಮುಳ್ಳಣ್ಣು ಪಕ್ಷಿಗಳಿಗಂತೂ ಆ ಸಮಯದಲ್ಲಿ ನಿತ್ಯದ ಆಹಾರವೇ ಆಗಿದೆ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ

